ಕರ್ನಾಟಕ ಸರ್ಕಾರ

# ಕನ್ನಡ ಪುಸ್ತಕ ಪ್ರಾಧಿಕಾರ

## ಜಾಣ ಜಾಣೆಯರ ಬಳಗ ಅರ್ಜಿ ನಮೂನೆ 2018-19

| ಕ್ರ. ಸಂ | ವಿವರ | ಹೆಸರು / ವಿಳಾಸ | ದೂರವಾಣಿ ಸಂಖ್ಯೆ / ಇ-ಮೇಲ್ ಸಂಖ್ಯೆ | ಸಹಿ/- |
|---|---|---|---|---|
| 1. | ಕಾಲೇಜಿನ ಹೆಸರು / ಪೂರ್ಣ ವಿಳಾಸ / ದೂರವಾಣಿ ಸಂಖ್ಯೆ ಇ-ಮೇಲ್ ಸಂಖ್ಯೆ | | | |
| 2. | ಪ್ರಾಂಶುಪಾಲರ ಹೆಸರು | | | |
| 3. | ಕನ್ನಡ ವಿಭಾಗದ ಮುಖ್ಯಸ್ಥರ ಹೆಸರು | | | |

4.

1. ಜಾಣ ಜಾಣೆಯರ ಬಳಗದಲ್ಲಿ ಇರುವ ಪದಾಧಿಕಾರಿಗಳ (ವಿದ್ಯಾರ್ಥಿಗಳ) ಸಂಖ್ಯೆ (5 ರಿಂದ 15 ಮಂದಿ ಮಾತ್ರ) ಅಧ್ಯಕ್ಷರು / ಉಪಾಧ್ಯಕ್ಷರನ್ನೊಳಗೊಂಡಂತೆ
2. ಪದಾಧಿಕಾರಿಗಳೂ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಕನಿಷ್ಠ ಒಬ್ಬರಾದರೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

| | ಪದನಾಮ | ಹೆಸರು | ತರಗತಿ | ವರ್ಗ | ದೂರವಾಣಿ | ಸಹಿ |
|---|---|---|---|---|---|---|
| 1. | ಅಧ್ಯಕ್ಷರು / ಅಧ್ಯಕ್ಷೆ | | | | | |
| 2. | ಉಪಾಧ್ಯಕ್ಷ / ಉಪಾಧ್ಯಕ್ಷೆ | | | | | |
| 3. | ಖಜಾಂಚಿ | | | | | |
| 4. | ಸದಸ್ಯರು | | | | | |
| 5. | ಸದಸ್ಯರು | | | | | |
| 6. | ಸದಸ್ಯರು | | | | | |
| 7. | ಸದಸ್ಯರು | | | | | |
| 8. | ಸದಸ್ಯರು | | | | | |
| 9. | ಸದಸ್ಯರು | | | | | |
| 10. | ಸದಸ್ಯರು | | | | | |
| 11. | ಸದಸ್ಯರು | | | | | |
| 12. | ಸದಸ್ಯರು | | | | | |
| 13. | ಸದಸ್ಯರು | | | | | |
| 14. | ಸದಸ್ಯರು | | | | | |
| 15. | ಸದಸ್ಯರು | | | | | |

…………………..2

| | | |
|---|---|---|
| 5. | ಜಾಣ ಜಾಣೆಯರ ಬಳಗದ ವತಿಯಿಂದ 2018-19ನೇ ಸಾಲಿನ ಮಾರ್ಚ್ ಒಳಗೆ ನಮ್ಮ ಕಾಲೇಜಿನಲ್ಲಿ ಹಮ್ಮಿಕೊಳ್ಳಬಹುದಾದ ನಾಲ್ಕು ಸಾಹಿತ್ಯ ಕಾರ್ಯಕ್ರಮಗಳ ವಿವರ | |
| | ಕಾರ್ಯಕ್ರಮ | ಕಾರ್ಯಕ್ರಮ ಹಮ್ಮಿಕೊಳ್ಳಬಹುದಾದ ಅಂದಾಜು ತಿಂಗಳು |
| | ನನ್ನ ಮೆಚ್ಚಿನ ಪುಸ್ತಕ ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ ಸ್ಪರ್ಧೆ | |
| | ಸ್ಥಳೀಯ ಹಿರಿಯ ಸಾಹಿತಿಗಳಿಂದ ಸಾಹಿತ್ಯ ರಚನೆ ಕುರಿತಂತೆ ವಿದ್ಯಾರ್ಥಿಗಳೊಂದಿಗೆ ಸಂವಾದ-<br>**(ಕಾರ್ಯಕ್ರಮದ ವಿವರ ನಮೂದಿಸುವುದು)** | |
| | ಜಿಲ್ಲೆಗೊಂದರಂತೆ ಜಾಣ ಜಾಣೆಯರ ಬಳಗದ ಆಯ್ದ ಅಭ್ಯರ್ಥಿಗಳಿಗೆ ಪುಸ್ತಕ ಪ್ರಕಾಶನ, ಕರಡಚ್ಚು ತಿದ್ದುವುದರ ಬಗ್ಗೆ ಸ್ಥಳೀಯ ಪ್ರಕಾಶಕರೊಂದಿಗೆ ಒಂದು ಸಂವಾದ ಏರ್ಪಡಿಸುವುದು-<br>**(ಕಾರ್ಯಕ್ರಮದ ವಿವರ ನಮೂದಿಸುವುದು)** | |
| | ಆಯಾ ಕಾಲೇಜಿನ ಜಾಣ ಜಾಣೆಯರ ಬಳಗ ನಿರ್ಣಯಿಸುವ ಯುವಜನರಲ್ಲಿ ಸಾಹಿತ್ಯಾಸಕ್ತಿ ಹೆಚ್ಚಿಸುವ ಇತರೆ ಯಾವುದಾದರೂ ಕಾರ್ಯಕ್ರಮಗಳು-<br>**(ಕಾರ್ಯಕ್ರಮದ ವಿವರ ನಮೂದಿಸುವುದು)** | |
| 6. | ಜಾಣ ಜಾಣೆಯರ ಬಳಗದ ಕಾರ್ಯಕ್ರಮದ ವೆಚ್ಚವನ್ನು **RTGS** ಮೂಲಕ ಪಾವತಿಸಲು ಅನುಕೂಲವಾಗುವಂತೆ ತಮ್ಮ ಕಾಲೇಜಿನ ಬ್ಯಾಂಕ್ ಖಾತೆಯ ಪಾಸ್ ಬುಕ್ಕಿನ ಪ್ರಥಮ ಪುಟದ ಅಥವಾ ಚೆಕ್ ಲೀಫ್ ನ ಜಾರಾಕ್ಸ್ ಪ್ರತಿ ಲಗತ್ತಿಸುವುದು. | |

ಮೇಲ್ಕಂಡ ಎಲ್ಲ ವಿವರಗಳೂ ಸತ್ಯವಾಗಿರುತ್ತವೆಯೆಂದೂ ಈ ಸಂಬಂಧ ಯಾವುದೇ ತೊಡಕುಗಳು ಬಂದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ನಿರ್ಣಯಾನುಸಾರ ನಿರ್ವಹಿಸುತ್ತೇವೆಂದು ಪ್ರಮಾಣೀಕರಿಸುತ್ತೇವೆ.

ದಿನಾಂಕ :

ಸ್ಥಳ :

ತಮ್ಮ ವಿಶ್ವಾಸಿ,

| ಪ್ರಾಂಶುಪಾಲರ | ಕನ್ನಡ ವಿಭಾಗದ ಮುಖ್ಯಸ್ಥರ | ಜಾಣ ಜಾಣೆಯರ ಬಳಗದ ಅಧ್ಯಕ್ಷರ / |
|---|---|---|
| ಹೆಸರು | ಹೆಸರು | ಅಧ್ಯಕ್ಷೆ ಹೆಸರು / |
| ಸಹಿ | ಸಹಿ | ಸಹಿ |
| ಮೊಹರು | ಮೊಹರು | |

ವಿ. ಸೂ. : ಈ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಕಾಲೇಜಿನ ಪ್ರಾಂಶುಪಾಲರ ಮನವಿ ಪತ್ರದೊಂದಿಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002 ದೂರವಾಣಿ ಸಂಖ್ಯೆ: 080-22107704 / 22484516 ಇವರಿಗೆ ಕಳುಹಿಸುವುದು.

ಕನ್ನಡ ಪುಸ್ತಕ ಪ್ರಾಧಿಕಾರ

## ಜಾಣ ಜಾಣೆಯರ ಬಳಗ ರಚನೆ

ವಿದ್ಯಾರ್ಥಿ ಯುವಜನರನ್ನು ಸಾಹಿತ್ಯಾಭಿರುಚಿಗೆ ಆಕರ್ಷಿಸಲು ಹಾಗೂ ಸಾಹಿತ್ಯದ ಕ್ರಿಯಾಶೀಲತೆಯನ್ನು ಬೆಳೆಸಲು ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಜಾಣ ಜಾಣೆಯರ ಬಳಗಗಳನ್ನು ರಚಿಸಬಹುದಾಗಿದೆ.

**1) ಹೆಸರು ಮತ್ತು ಸ್ವರೂಪ** :

I. ಕನ್ನಡ ಪುಸ್ತಕ ಪ್ರಾಧಿಕಾರದ ನೇರ ಉಸ್ತುವಾರಿ ಹಾಗೂ ಮಾರ್ಗದರ್ಶನದಲ್ಲಿ 'ಜಾಣ ಜಾಣೆಯರ ಬಳಗ' ಕಾರ್ಯ ನಿರ್ವಹಿಸುತ್ತದೆ.

**2) ಪದಾಧಿಕಾರತ್ವ:**

I. ಬಳಗವು ಪ್ರತಿ ಕಾಲೇಜಿನಲ್ಲಿ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಳ್ಳುತ್ತದೆ. ಅಧ್ಯಕ್ಷ / ಅಧ್ಯಕ್ಷೆ, (ಅಗತ್ಯವಿರುವ ಕಡೆ ಗೌರವಾಧ್ಯಕ್ಷ/ ಗೌರವಾಧ್ಯಕ್ಷೆರನ್ನೂ ಆಯ್ಕೆ ಮಾಡಬಹುದು) ಉಪಾಧ್ಯಕ್ಷ /ಉಪಾಧ್ಯಕ್ಷೆ (ಅಗತ್ಯವಿರುವ ಕಡೆ ಒಬ್ಬರಿಗಿಂತ ಹೆಚ್ಚು, ಜನರನ್ನು ಉಪಾಧ್ಯಕ್ಷ / ಉಪಾಧ್ಯಕ್ಷೆ ಯರನ್ನು ಆಯ್ದುಕೊಳ್ಳಬಹುದು.

II. ಆಯಾ ಕಾಲೇಜಿನ ಯಾವುದೇ ವ್ಯಕ್ತಿ ಈ ಬಳಗದ ಸದಸ್ಯರಾಗಬಹುದು.

III. ಆಯಾ ಕಾಲೇಜಿನ ಮುಖ್ಯಸ್ಥರ ಮೂಲಕ ಅನುಮೋದನೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಾಧಿಕಾರವು ಅನುಮೋದಿಸಿದ ನಂತರ ಅದು ಅಧಿಕೃತವಾಗುತ್ತದೆ.

IV. ಈ ಬಳಗದ ಆಶಯಗಳಿಗೆ ಅನುಗುಣವಾಗಿ ಪ್ರತಿಯೊಬ್ಬ ಸದಸ್ಯ/ಸದಸ್ಯೆ ಸಾಮರ್ಥ್ಯಾನುಸಾರ ಸ್ವಯಂ ಪ್ರೇರಣೆಯಿಂದ ಕಾರ್ಯ ನಿರ್ವಹಿಸಿ ಜಾಣ ಜಾಣೆಯರ ಬಳಗವನ್ನು ಸಕ್ರಿಯವಾಗಿಡಬೇಕು.

V. ಆಯಾ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಕನ್ನಡ ವಿಭಾಗಗಳ ಮುಖ್ಯಸ್ಥರು ಇದರ ಪದನಿಮಿತ್ತ ಸದಸ್ಯರಾಗಿರುತ್ತಾರೆ.

VI. ಈ ಪದಾಧಿಕಾರಿಗಳ ಜೊತೆ ಸದಸ್ಯರ ಸಂಖ್ಯೆಗೆ ಅನುಗುಣವಾಗಿ 5 ರಿಂದ 15 ಸಂಖ್ಯೆಯೊಳಗೆ ಕ್ರಿಯಾಶೀಲರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು.

**3) ಪದಾಧಿಕಾರಿಗಳ ಆಯ್ಕೆಗೆ ಸಾಮಾನ್ಯ ನಿಯಮಾವಳಿಗಳು:**

ಆಯಾ ವಾರ್ಷಿಕ ಸಾಲಿಗೆ ಆಯ್ಕೆಯಾಗುವ ಪದಾಧಿಕಾರಿಗಳಲ್ಲಿ ಒಬ್ಬರಾದರೂ ವಿದ್ಯಾರ್ಥಿನಿ, ಒಬ್ಬರಾದರೂ ಅತಿ ಹಿಂದುಳಿದ ವರ್ಗದವರು, ಒಬ್ಬರಾದರೂ ಪರಿಶಿಷ್ಟ ಜಾತಿ / ಪಂಗಡಕ್ಕೆ ಸೇರಿದವರು ಇರುವುದು ಅಗತ್ಯವಾಗಿರುತ್ತದೆ. ಆಯಾ ವರ್ಗದ ವಿದ್ಯಾರ್ಥಿ / ವಿದ್ಯಾರ್ಥಿನಿಯರು ಕಾಲೇಜುಗಳಲ್ಲಿ ದಾಖಲುಗೊಂಡಿಲ್ಲದಲ್ಲಿ ಈ ನಿಯಮ ಸಡಲಿಸಬಹುದಾಗಿದೆ.

**4) ಬಳಗದ ಚಟುವಟಿಕೆಗಳು :**

I. ಹೊಸ ಬರಹಗಾರರ ಚೊಚ್ಚಲ ಕೃತಿಗೆ ಪ್ರೋತ್ಸಾಹಧನಕ್ಕೆ ಆಯ್ಕೆ ಮಾಡುವ ಪ್ರಕಟಣೆ ಕೊಟ್ಟಾಗ ಹಸ್ತಪ್ರತಿಗಳನ್ನು ಕಳುಹಿಸುವಂತೆ ಯುವಲೇಖಕ / ಲೇಖಕಿಯರನ್ನು ಪ್ರೋತ್ಸಾಹಿಸುವುದು.

II. ಎರಡು ಮೂರು ತಿಂಗಳಿಗೊಮ್ಮೆಯಾದರೂ ಒಂದು ಸಾಹಿತ್ಯಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಕಾಲೇಜಿನಲ್ಲಿ ಸಾಹಿತ್ಯಿಕ ವಾತಾವರಣವನ್ನು ಕ್ರಿಯಾಶೀಲವಾಗಿರಿಸುವುದು. ಈ ಚಟುವಟಿಕೆಗಳಿಗೆ ಕಾರ್ಯಕ್ರಮವೊಂದಕ್ಕೆ ರೂ. 5,000/- (ಐದು ಸಾವಿರ ರೂ.ಗಳು ಮಾತ್ರ)ಗಳ ಸಹಾಯಧನವನ್ನು ಪ್ರಾಧಿಕಾರವು ನೀಡುತ್ತದೆ. ಈ ಕಾರ್ಯಕ್ರಮವು ಪ್ರಾಧಿಕಾರದ ಪೂರ್ವಾನುಮತಿ ಹೊಂದಿರತಕ್ಕದ್ದು. ಈ ಕಾರ್ಯಕ್ರಮಗಳನ್ನು ಜಾಣ ಜಾಣೆಯರ ಬಳಗವು ಅಗತ್ಯವಿದ್ದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತಿತರರ ಜೊತೆ ಸಹಯೋಗದಲ್ಲೂ ಕಾರ್ಯಕ್ರಮ ರೂಪಿಸಬಹುದಾಗಿದೆ.

III. ಕನ್ನಡ ಪುಸ್ತಕ ಪ್ರಾಧಿಕಾರವು, ವಾಚನಾಭಿರುಚಿ ಕಮ್ಮಟ, ಯುವ ಲೇಖಕರ ಸಮ್ಮೇಳನ, ಪುಸ್ತಕ ಮೇಳ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ "ನನ್ನ ಮೆಚ್ಚಿನ ಪುಸ್ತಕ" ವಿಷಯ ಮಂಡನೆ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಸಕ್ರಿಯ ಸಹಕಾರ ನೀಡುವುದು.

IV. ಪುಸ್ತಕ ಓದುವ ಅಭಿರುಚಿ, ಸಾಹಿತ್ಯ ರಸ ಗ್ರಹಣದ ಆಸಕ್ತಿ ಹೆಚ್ಚಿಸಲು ಹೊಸ ತಲೆಮಾರಿನವರಿಗಾಗಿ ರಚನಾತ್ಮಕವಾದ ಯಾವುದೇ ಬಗೆಯ ಸೂಕ್ತ ಸಾಹಿತ್ಯಿಕ ಕಾರ್ಯ ಚಟುವಟಿಕೆಗಳನ್ನು ಪುಸ್ತಕ ಪ್ರಾಧಿಕಾರದ ಅನುದಾನದ ಸಹಾಯದಿಂದ ಕೈಗೆತ್ತಿಕೊಳ್ಳಬಹುದಾಗಿದೆ.

**5) ಜಾಣ ಜಾಣೆಯರ ಬಳಗದ ನಿರ್ವಹಣೆ – ಮಾರ್ಗದರ್ಶನ :**

ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರು ಆಯಾ ಪ್ರಾದೇಶಿಕ ವಿಭಾಗಗಳಿಗೆ, ಕಾರ್ಯಚಟುವಟಿಕೆಗಳಿಗೆ ಅಗತ್ಯ ಮಾರ್ಗದರ್ಶನ ಹಾಗೂ ಸಹಕಾರ ಒದಗಿಸುತ್ತಾರೆ.

ಸಹಿ/-

ಆಡಳಿತಾಧಿಕಾರಿ

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

**********